ISSN : 2320-0391


साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अक्टूबर-दिसम्बर २०१९



ಡಾ. ಬಿ.ಬಿ. ಪಾಟೀಲ
ಹಿಂದಿ ವಿಭಾಗ
SB/KCP ಕಾಲೇಜ್
ವಿಜಾಪುರ.

RNI Regd. No. KARBIL/2014/54464



ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಮಲ್ಲಿ ಭೇದ-ಭಾವ ಪ್ರಭು ದೂರವಾಗಲಿ

ಒಂದು ತೋಟದಲ್ಲಿ ಹಲವು ಬಣ್ಣದ ಹೂಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಆ ಹೂಗಳಂತೆ ಮತಗಳ ಮಕರಂದ ಬೀರಲಿ
ನಮ್ಮಲ್ಲಿ ಭೇದ-ಭಾವ ಪ್ರಭು ದೂರವಾಗಲಿ

ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೇ?
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೇ?
ಈ ಸೃಷ್ಟಿಯಲ್ಲಿ ಸರ್ವರೂ ಸಮನಾಗಿ ಬಾಳಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ

ಮಣ್ಣಿನಿಂದ ಆದ ಮಡಿಕೆ ಮಣ್ಣಿಗನ್ಯವೇ?
ಚಿನ್ನದಿಂದ ಆದ ಒಡವೆ ಚಿನ್ನಗನ್ಯವೇ?
ನಿನ್ನಿಂದ ಆದ ಜೀವರು ನಿನ್ನಂತೆ ಕಾಣಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ

– ಇಬ್ರಾಹೀಮ್ ಸುತಾರ

हम सब भारतीय हैं यह भावना जागृत हो
हे प्रभु, हमारे बीच के भेद-भाव दूर हो।

एक ही बाग के रंगबिरंगे फूल,
उसी तरह हमारे देश में हैं अनेक मत
उन फूलों-सा हर मत का मकरंद फैले
हे प्रभु, हमारे बीच के भेद-भाव दूर हो।
हमने घर बनाए तो भूमि ने ज्ञाति पूछी ?

साँस लेते समय हवा ने कुल पूछा ?
इस सृष्टि में सभी समान रूप से जिएँ
हे प्रभु हमारे बीच के भेद-भाव दूर हो।

मिट्टी से बना घडा क्या मिट्टी से अलग है?
सोने से बना जेवर, क्या सोने से भिन्न है?
तुमसे बने जीव तुमसा ही दिखे
हे प्रभु, हमारे बीच के भेद-भाव दूर हे।

- इब्राहीम सुतार

ISSN 2320-0371

सौम्य प्रकाशन
'कवीर कुंज' महाबलेश्वर कॉलनी,
दर्गा जेल के सामने,
विजयपुर - ५८६१०३ (कर्नाटक)

ಸೌಮ್ಯ ಪ್ರಕಾಶನ
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ.
ದರ್ಗಾ ಜೇಲ ಮುಂದೆ.
ವಿಜಯಪುರ - ೫೮೬೧೦೩ (ಕರ್ನಾಟಕ)

# ಪರಿವಿಡಿ


| | | | |
|---|---|---|---|
| ೧. | ಹೀಗೇಕೆ ? | • ಮೂಲ ಹಿಂದಿ<br>ಪ್ರೊ : ಸಾಹೇಬಹುಸೇನ ಜಹಾಗೀರದಾರ<br>ಕನ್ನಡಕ್ಕೆ ಪ್ರೊ : ಎಸ್.ಟಿ.ಮೇರವಾಡೆ. | ೩೨ |
| ೨. | ಕುವೆಂಪು–ಬೇಂದ್ರೆಯವರ ದೃಷ್ಟಿಯಲ್ಲಿ ಕವಿ–ಕಾವ್ಯ | • ಪ್ರೊ. ಬಿ. ಬಿ. ಡೆಂಗನವರ | ೩೪ |
| ೩. | ಹೃದಯ ಅರಳುವ ಶಿಕ್ಷಣ | • ಡಾ. ವಿಷ್ಣು ಎಂ. ಶಿಂದೆ | ೩೯ |
| ೪. | ಸ್ವಾತಂತ್ರ್ಯ ಹೋರಾಟದಲ್ಲಿ<br>ವೀರ ಸಿಂಧೂರ ಲಕ್ಷ್ಮಣನ ಪಾತ್ರ | • ಡಾ. ಸಿ. ಎಂ. ತಳವಾರ | ೪೩ |
| ೫. | ತಿಂಥಣಿ ಮೌನೇಶ್ವರ ಕುರಿತ ಸಾಹಿತ್ಯ :<br>ಒಂದು ಅವಲೋಕನ | • ಡಾ. ಎಂ. ಎಸ್. ಮಾಗಣಗೇರಿ | ೪೮ |
| ೬. | ಕರ್ನಾಟಕ ಕರಾವಳಿಯ ಬ್ರಾಹ್ಮಣ ಪರಂಪರೆಯಲ್ಲಿ<br>'ಪತಿತ ಬ್ರಾಹ್ಮಣ್ಯ'ದ ಸಮಸ್ಯೆ | • ಮಂಜುನಾಥ ಕರಬ | ೫೩ |
| ೭. | ಶರಣ ಸಾಹಿತ್ಯದಲ್ಲಿ ವಚನಕಾರರ<br>ಪಾತ್ರ ಮತ್ತು ಜನ ಜಾಗೃತಿ | • ಡಾ. ಲಿಂಗರಾಜ ಸಿ. ಮುಳ್ಳಳ್ಳಿ | ೬೦ |
| ೮. | ಅನುಪಮಾ ನಿರಂಜನರ ಆತ್ಮಕಥನಗಳಲ್ಲಿ<br>ಸ್ತ್ರೀ ಸಂವೇದನೆಗಳು | • ದೇವಿಂದ್ರಮ್ಮ ಶರಣಪ್ಪ | ೬೫ |


**ಅಂಕಣ – ಎಂಟು**


| | | | |
|---|---|---|---|
| ೯. | ನಾನು ನಾನಾಗಿ ಇರಬಹುದು | • ಡಾ. ಆರ್. ವಿ. ಪಾಟೀಲ | ೬೯ |

# ಹೀಗೇಕೆ ?

• ಮೂಲ ಹಿಂದಿ ಪ್ರೊ : ಸಾಹೇಬಹುಸೇನ ಜಹಾಗೀರದಾರ
ಕನ್ನಡಕ್ಕೆ ಪ್ರೊ : ಎಸ್.ಟಿ.ಮೇರವಾಡೆ

ಮುಂಬೈ ಕನಸಿನ ಮಹಾನಗರ. ಮನೋಹರ ವರ್ಣರಂಜಿತ ನಗರವೂ ಹೌದು. ಈ ನಗರಕ್ಕೆ ಪ್ರತಿದಿನ ಸಾವಿರಾರು ಜನ ತಮ್ಮ ಕಣ್ಣಿನಲ್ಲಿ ಅನೇಕ ಕನಸುಗಳನ್ನು ಹೊತ್ತುಕೊಂಡು ಬರುತ್ತಾರೆ. ನನಗೆ ಈ ನಗರ ನನ್ನದೆನಿಸುತ್ತದೆ. ಯಾಕೆಂದರೆ ನಾನೂ ಸಹ ಅನೇಕ ಕನಸುಗಳೊಂದಿಗೆ ಈ ನಗರಕ್ಕೆ ಬಂದಿದ್ದೆ. ನನ್ನ ಜೀವನದ ಅತ್ಯಂತ ಅಮೂಲ್ಯವಾದ ಒಂಬತ್ತು ವರ್ಷಗಳನ್ನು ಇಲ್ಲಿ ಕಳೆದಿರುವೆ. ಈ ನಗರ ನನಗೆ ಜೀವಿಸುವುದನ್ನು ಕಲಿಸಿದೆ. ಈ ನಗರದ ಸಣ್ಣ ಪುಟ್ಟ ಓಣಿಗಳ ಪರಿಚಯವೂ ನನಗೆ ಇದೆ. ಇಂದಿಗೂ ನಾನು ವರ್ಷಕ್ಕೆ ನಾಲ್ಕೈದು ಸಲ ಬಂದು ಸುತ್ತಾಡುತ್ತೇನೆ.

ಜನವರಿ ತಿಂಗಳು. ಈ ತಿಂಗಳು ಇಲ್ಲಿಯ ವಾತಾವರಣ ಅತ್ಯಂತ ಸುಖಮಯವಾಗಿರುತ್ತದೆ. ಸಮುದ್ರದ ತಾಪಮಾನದಿಂದ ಇಲ್ಲಿ ಚಳಿ ಕಡಿಮೆ ಇರುತ್ತದೆ. ಮುಂಜಾನೆಯ ಹನ್ನೊಂದು ಗಂಟೆಯ ಸಮಯ ನಾನು ದಾದರದ ಪಶ್ಚಿಮ ಭಾಗದಲ್ಲಿದ್ದ ಛಬಿಲದಾಸ ರಸ್ತೆಯ ಬದಿಗಿದ್ದ ಐಡಿಯಲ್ ಪುಸ್ತಕದ ಅಂಗಡಿಯಿಂದ ಕೆಲವು ಪುಸ್ತಕಗಳನ್ನು ಖರೀದಿಸಿ, ಪ್ರಸಿದ್ಧ ಶ್ರೀಕೃಷ್ಣ ವಡಾ–ಪಾವ ಸೆಂಟರಿಗೆ ಹೋದೆನು. ಅಲ್ಲಿಯ ವಡಾ–ಪಾವದ ಸ್ವಾದಿಷ್ಟವೇ ಬೇರೆ. ನಾನೊಂದು ವಡಾ–ಪಾವ ಖರೀದಿಸಿ ಅಂಗಡಿಯ ಬದಿಗೆ ನಿಂತು ತಿನ್ನುತ್ತಿದ್ದೇನು. ಆಕಸ್ಮಿಕವಾಗಿ ನನ್ನ ಬೆನ್ನಿಗೆ ಯಾರದೋ ಕೈ ತಾಗಿದಂತಾಯಿತು, ತಿರುಗಿ ನೋಡಿದಾಗ ಸುಮಾರು ಎಪ್ಪತ್ತು ವಯಸ್ಸಿನ ಮುಪ್ಪಿನ ಮುದಕ, ಆತನ ಕಣ್ಣಿಗೆ ದಪ್ಪ ಗ್ಲಾಸಿನ ಚಸ್ಮಾ, ಹೊಲಸು ಹಾಗೂ ಹರಿದ ಧೋತ್ರ ಮತ್ತು ಶರಟು ತಲೆಯ ಮೇಲೆ ಗಾಂಧಿ ಟೋಪಿ, ಕೈಯಲ್ಲಿ ಒಂದು ಡಬ್ಬಿ ಜೋತಾಡುತ್ತ ಇತ್ತು. ಆ ಮುಪ್ಪಿನ ಮನುಷ್ಯನಿಗೆ ನೋಡಿ ಆತ ಭಿಕ್ಷುಕನಂತೆ ಕಾಣುತ್ತಿರಲಿಲ್ಲ.

"ಏನಾಯಿತು ಬಾಬಾ ! ನಾನು ಕೇಳಿದೆ."

ಆತ ಹೇಳಿದ – "ಮಗು, ನನಗೊಂದು ವಡಾ-ಪಾವ ಕೊಡುಸುತ್ತಿಯಾ?"

ನಾನು ತಕ್ಷಣ ಜೇಬಿನಿಂದ ಐವತ್ತು ರೂಪಾಯಿ ನೋಟ ತೆಗೆದು ಕೊಡುತ್ತ ಹೇಳಿದೆ "ಬಾಬಾ ತಗೆದುಕೊಳ್ಳಿ, ನಿನಗೆ ಇಷ್ಟವಾದದ್ದು ತೆಗೆದುಕೊಳ್ಳಿರಿ,"

ಬಾಬಾ ಹೇಳಿದ. "ಇಲ್ಲ ಮಗು, ನನಗೆ ಹಣ ಬೇಕಾಗಿಲ್ಲ, ಕೇವಲ ಒಂದು ವಡಾ–ಪಾವ ಕೊಡಿಸಿರಿ."

ನಾನು ಕೌಂಟರ ಕಡೆಗೆ ಹೋಗಿ ಒಂದು ವಡಾ–ಪಾವ ತಂದು ಕೊಡುತ್ತ ಕೇಳಿದೆ "ತಾವು ಎಲ್ಲಿರುವಿರಿ? ಬಾಬಾ"

ಬಾಬಾ ಉತ್ತರಿಸಿದ "ಸೊಲ್ಲಾಪುರದ ಹತ್ತಿರ ಒಂದು ಗ್ರಾಮದಲ್ಲಿ ಪತ್ನಿಯೊಂದಿಗೆ ಇರುತ್ತೇನೆ. ನನ್ನ ಮಗ ಸುರೇಶ ಇಲ್ಲಿಯೇ ಮುಂಬೈಯಲ್ಲಿ ತನ್ನ ಹೆಂಡತಿಯೊಂದಿಗೆ ಇರುತ್ತಾನೆ. ಆತ ಪ್ರೀತಿಸಿ ಮದುವೆ ಮಾಡಿಕೊಂಡಿದ್ದಾನೆ. ಅವನ ಹೆಂಡತಿ ಸುರೇಖಾ, ತುಂಬಾ ಓದಿದ್ದಾಳೆ. ಅವಳು ನಮ್ಮೊಂದಿಗೆ ಊರಲ್ಲಿ ಇರಲು ಬಯಸುವುದಿಲ್ಲ. ಸುರೇಶ ಒಂದೆರೆಡು ತಿಂಗಳಲ್ಲಿ ಊರಿಗೆ ಬಂದು ಹೋಗುತ್ತಾನೆ. ಎರಡು ದಿನಗಳ ಹಿಂದೆ ಸುರೇಶನ ಫೋನ್ ಬಂದಿತ್ತು. ಆತ ಅಮೇರಿಕಾಗೆ ಹೋಗುವವನಿದ್ದಾನೆ. ಮರಳಿ ಯಾವಾಗ ಬರುತ್ತಾನೋ ಏನೋ? ಅಲ್ಲಿಯ ವರೆಗೆ ನಾವು ಜೀವಿತವಾಗಿ ಇರುತ್ತೇವೊ ಇಲ್ಲೊ, ಅದಕ್ಕಾಗಿ ಅವನಿಗೆ ಬೆಟ್ಟಿಯಾಗಬೇಕೆಂದು ಬಂದಿರುವೆ."


ISSN : 2320-0391 'ಸೃಜನ' ಅಕ್ಟೋಬರ್ – ಡಿಸೆಂಬರ್ 2019

"ಇಲ್ಲಿ ಎಲ್ಲಿ ಇರುತ್ತಾನೆ?" ಅಂತಾ ನಾನು ಕೇಳಿದೆ.

ಆತ ಹೇಳಿದ "ಗುರ್ತಿಲ್ಲಾ ಮಗು ಘೋನಿನಲ್ಲಿ ಹೇಳುತ್ತಾ ಇದ್ದ ತುಂಬಾ ವ್ಯಸ್ಥವಾಗಿದ್ದೇನೆ. ಊರಿಗೆ ಬರಲು ಆಗುವುದಿಲ್ಲ. ನಾನು ಹೇಳಿದೆ. "ಇಂತಹ ದೊಡ್ಡ ನಗರದಲ್ಲಿ ವಿಳಾಸವಿಲ್ಲದೆ ಹೇಗೆ ಹುಡುಕುತ್ತಿರಿ ಬಾಬಾ? ಆತ ತನ್ನ ಜೇಬಿನಿಂದ ಒಂದು ಹಳೆಯದಾದ ಮೋಬಾಯಿಲ್ ಫೋನ್ ತೆಗೆದು ನನಗೆ ಕೊಡುತ್ತಾ ಹೇಳಿದ – "ನೋಡು, ಇದರಲ್ಲಿ ಆತನ ನಂಬರ ಇದೆ, ನಾನು ಆ ನಂಬರ ಮೇಲೆ ಕಾಲ್ ಮಾಡಿದರೆ ಎರಡು –ಮೂರು ಸಲ ರಿಂಗ ಆಗುತ್ತೆ, ಎರಡು–ಮೂರು ಸಲ ರಿಂಗ್ ನಂತರ ಹೆಣ್ಣು ಮಗಳು ಮಾತನಾಡುತ್ತಾಳೆ ಅವರು ವ್ಯಸ್ಥರಾಗಿದ್ದಾರೆ."

ಆಗ ನಾನು ನನ್ನ ಮೋಬಾಯಿಲ್‌ದಿಂದ್ ಆ ನಂಬರಿಗೆ ಡಾಯಲ್ ಮಾಡಿದರೆ ಹಲೋ ಎಂಬ ಉತ್ತರ ಸಿಕ್ಕಿತು.

ನಾನು ಕೇಳಿದೆ – "ತಾವು ಸುರೇಶ ಇದ್ದಿರಾ?"

ಉತ್ತರ ಸಿಕ್ಕಿತು – "ಹೌದು, ಮಾತನಾಡಿರಿ".

ನಾನು ಹೇಳಿದೆ– "ದಾದರದಿಂದ ಮಾತನಾಡುತ್ತಿದ್ದೇನೆ."

ಆತ ಹೇಳಿದ – "ಹೌದು ಹೇಳಿರಿ"

"ತಮ್ಮ ತಂದೆಯವರು ಊರಿಂದ ಬಂದಿದ್ದಾರೆ, ನಿಮ್ಮೊಂದಿಗೆ ಮಾತನಾಡುತ್ತಾರಂತೆ" ಅಂತಾ ಹೇಳಿದೆ.

ಉತ್ತರ ಬಂತು – "ರಾಂಗ ನಂಬರ"

ಆತ ಫೋನ್ ಕಟ್ ಮಾಡಿದನು. ಮತ್ತೆ ಎರಡನೆಯ ಸಲ ಡಯಲ್ ಮಾಡಿದಾಗ ಆತನ ಮೊಬಾಯಿಲ್ ಸ್ವೀಚ್ ಆಫ್ ಆಗಿತ್ತು.

ಬಾಬಾ ತನ್ನ ಜೇಬಿನಿಂದ ಒಂದು ಕಾಗದ ತುಂಡು ತೆಗೆದು ಕೊಡುತ್ತಾ ಹೇಳಿದನು. ನಿನ್ನೆ ಸುರೇಶ ಫೋನ ಮುಖಾಂತರ ಈ ವಿಳಾಸ ಬರೆಸಿದ್ದನು. ಮುಂಜಾನೆಯಿಂದ ಬಹಳಷ್ಟು ಜನರಿಗೆ ಈ ವಿಳಾಸ ಕೇಳತ್ತಾ ಇದ್ದೇನೆ ಎಲ್ಲರೂ ಈ ವಿಳಾಸ ತಪ್ಪಿದೆ ಅಂತಾ ಹೇಳುತ್ತಿದ್ದಾರೆ.

ನಾನು ಆ ಕಾಗದದ ತುಂಡಿನ ಮೇಲೆ ಬರೆದ ವಿಳಾಸ ನೋಡಿದೆ. ಅದರ ಮೇಲೆ ಬರೆದಿತ್ತು. ಛತ್ರಪತಿ ಶಿವಾಜಿ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ, ಐಡಿಯಲ್ ಪುಸ್ತಕ ಡೀಪೋದ ಹತ್ತಿರ, ದಾದರ (ಪಶ್ಚಿಮ).

ಆಗ ನಾನು ಆ ಬಾಬಾಗೆ ಹೇಳಿದೆನು – "ಬಾಬಾ ವಿಮಾನ ನಿಲ್ದಾಣ ಅಂಧೇರಿ (ಪೂರ್ವ) ದಲ್ಲಿದೆ."

ನಾನು ಆ ಮುಪ್ಪಿನ ಬಾಬಾಗೆ ಅಂಧೇರಿ ಉಪನಗರದ ಬಗ್ಗೆ ಏನು ಗುರ್ತು? ಈಗ ನನಗೆ ಎಲ್ಲವು ಸರಿಯಾಗಿ ತಿಳಿಯಿತು. ಆ ಮುಪ್ಪಿನ ತಂದೆಗೆ ಆತನ ಮಗ ಬೆಟ್ಟಿಯಾಗಲು ಬಯಸುತ್ತಿಲ್ಲ.

ನಾನು ಆ ಮುಪ್ಪಿನ ಜೀವಕ್ಕೆ ತಿಳಿಸುತ್ತಾ ಹೇಳಿದೆ, "ಬಾಬಾ ತಮ್ಮ ಮಗ ಈಗಾಗಲೇ ಅಮೇರಿಕಾಕ್ಕೆ ಹೋಗಿರಬಹುದು. ತಾವು ತಮ್ಮ ಊರಿಗೆ ಹೋಗುವದು ಒಳ್ಳೆಯದು."

ನಾನು ನನ್ನ ಜೇಬಿನಿಂದ ಹಣ ತೆಗೆದು ಆತನಿಗೆ ಕೊಟ್ಟೆನು. ಆತನ ಕೈಯಲ್ಲಿ ಜೋತಾಡುತ್ತಿದ್ದ ಸ್ಟೀಲ್ ಡಬ್ಬಿಯ ಬಗ್ಗೆ ಕೇಳಿದೆ. "ಬಾಬಾ ಈ ಡಬ್ಬಿಯಲ್ಲಿ ಏನಿದೆ?"

ಆತ ಹೇಳಿದ – "ಬೇಸನಿನ ಉಂಡಿ ಇವೆ. ಸುರೇಶನಿಗೆ ಬಹಳ ಇಷ್ಟವಾದ ಉಂಡೆಗಳು. ಅವನ ತಾಯಿ ತನ್ನ ಕೈಯಿಂದ ತಯಾರ ಮಾಡಿ ಕಳಿಸಿದ್ದಾಳೆ". ಈ ಮಾತು ಕೇಳುತ್ತಲೆ ನಾನು ದಂಗಾದೆ. ಯಾರೋ ಚೂಪಾದ ಚಾಕೂವಿನಿಂದ ನನ್ನ ಕರಳು ಕತ್ತರಿಸಿದಂತಾಯಿತು. ನನ್ನ ಕಣ್ಣಿನಿಂದ ಕಣ್ಣೀರು ಬೀಳುತ್ತಿದ್ದವು. ನಾನು ಆ ಬಾಬಾನನ್ನು ಬಿಟ್ಟು ಹೋರಟು ಹೋದೆನು.

ರಾತ್ರಿ ನನಗೆ ನಿದ್ದೆ ಬರಲಿಲ್ಲ. ಮೇಲಿಂದ ಮೇಲೆ ನೆನಪಾಗುತ್ತಾ ಇತ್ತು, ಆ ಮುಪ್ಪಿನ ಬಾಬಾನ ಹತ್ತಿರ ಬೇಸನಿನ ಉಂಡಿ ಇದ್ದವು. ಅದರಲ್ಲಿಯು ಒಂದು ಉಂಡಿ ತಿನ್ನಬಹುದಿತ್ತು. ಆದರೆ ತಿನ್ನಲಿಲ್ಲ; ಹಸಿವಾಗಿತ್ತು. ನನ್ನಿಂದ ವಡಾ–ಪಾವ ಬೇಡಿ ತಿಂದನು. ಯಾಕೇ ? ಹೀಗೆಕೆ ?

■■

---

ಪ್ರಾಚಾರ್ಯರು, ಬಿ.ಎಲ್.ಡಿ.ಇ.ಸಂಸ್ಥೆಯ ಬಸವೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ
ಬಸವನ ಬಾಗೇವಾಡಿ ಮೊ. ೯೪೪೮೧೮೫೭೭೦೫